### ಕೆರೆ ಸಮ್ಮೇಳನ ಸಮಾರೋಪ | ಪೇಜಾವರ ಶ್ರೀಗಳು

# ಪರಿಸರ ಸಂರಕ್ಷಣೆಗೆ ಸಂತರೂ ಕೈಜೋಡಿಸಲಿ



ಶಿರಸಿ: ಪರಿಸರ ಸಂರಕ್ಷಣೆ ಹಾಗೂ ಸಮತೋಲನ ರಕ್ಷಿಸುವ ವಿಷಯದಲ್ಲಿ ಸಂತರು, ಸಮಾಜ ಹಾಗೂ ಸರ್ಕಾರದ ಜೊತೆಗೆ ಮಹತ್ವರವಾಗಿದ್ದು, ಸಾಂಘಿಕವಾಗಿ ಪಂಚಭೂತಗಳ ಮಾಲಿನ್ಯಕ್ಕೆ ನಿಯಂತ್ರಣ ತರಬೇಕಿದೆ ಎಂದು ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ನುಡಿದರು.

ಶಿರಸಿಯ ಸ್ವರ್ಣವಲ್ಲಿಯಲ್ಲಿ ನಡೆದ 3 ದಿನಗಳ ರಾಷ್ಟ್ರೀಯ ಕೆರೆ ಸಮ್ಮೇಳನ ಸಮಾರೋಪದಲ್ಲಿ ಶ್ರೀಗಳು ಮಾತನಾಡಿದರು.

ಮನುಷ್ಯನು ಪ್ರಾಣ, ಭೂಮಿ ಸೇರಿದಂತೆ ಸೃಷ್ಟಿಯ ಮೇಲೆ ಆಕ್ರಮಣ ಮಾಡುತ್ತಿರುವ ಪರಿಣಾಮ ಪರಿಸರ ಸಮತೋಲನ ಕಳೆದುಕೊಂಡಿದೆ. ಜಲಮೂಲಗಳು ಕಲುಷಿತಗೊಂಡು ಕುಡಿಯಲು ನೀರಿಲ್ಲದ ಸ್ಥಿತಿ ಎದುರಾಗಿದೆ. ಮಾನವನಲ್ಲಿ ದುರಾಸೆ ಹೆಚ್ಚುತ್ತಿರುವ ಕಾರಣ ಜಗತ್ತಿನಲ್ಲಿ ಅತ್ಯಾಚಾರ, ಆಕ್ರಮಣ ನಡೆಯುತ್ತಿದೆ. ನಗರೀಕರಣದ ಯಂತ್ರ ಹಾಗೂ ರಾಜಕಾರಣಿಗಳ ತಂತ್ರಗಳಿಂದ ಭೂಮಿ ಮತ್ತಷ್ಟು ಮಲಿನವಾಗಿದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಂತರ ಸಹಕಾರ ಅಗತ್ಯ ಎಂದರು.

ವೈಜ್ಞಾನಿಕ ಪರೀಕ್ಷೆ ಮಾಡದೆ ನದಿ ತಿರುವು ಮಾಡುವುದು ಸರಿಯಲ್ಲ .ನದಿ ನೀರು ಬತ್ತಿಸುವ ಬದಲು ಸದಾ ಕಾಲ ನೀರು ಹರಿಯುವಂತಹ ಯೋಜನೆಗೆ ಸರ್ಕಾರ ಗಮನ ನೀಡಬೇಕು ಎಂದರು. ಯುವ ಪೀಳಿಗೆ ಕೈಯಲ್ಲಿ ಸ್ವರ್ಣವಲ್ಲಿ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಮಾತನಾಡಿ, ದೇಶದ ಭವಿಷ್ಯ ಯುವ ಪೀಳಿಗೆಯಲ್ಲಿದ್ದರೆ ಪರಿಸರದ ಭವಿಷ್ಯ ಕೂಡ ಯುವ ಪೀಳಿಗೆ ಮೇಲಿದೆ ಎಂದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಡಾ. ವಾಮನಾಚಾರ್ಯ ಮಾತನಾಡಿ, 5 ಲಕ್ಷ ರೂ.ಗಳಿಗಿಂತ ಕಡಿಮೆ ಖರ್ಚಿನಲ್ಲಿ ಯಾವುದೇ ಕೆರೆ ಹೂಳೆತ್ತುವ ಕಾರ್ಯವಿದ್ದರೆ ಮಂಡಳಿ ಸಹಾಯ ಹಸ್ತ ನೀಡಲಿದೆ ಎಂದರು.

ಈ ಸಂದರ್ಭದಲ್ಲಿ ಜೀವ ವೈವಿಧ್ಯ, ಪರಿಸರ ಜಾಗೃತಿಗೆ ಅನವರತ ಕಾರ್ಯ ಮಾಡಿದ ಆನೇಕಲ್ ಶಿವನಹಳ್ಳಿಯ ರಾಮಕೃಷ್ಣ ಮಿಷನ್‌ನ ವಿಷ್ಣುಮಯಾನಂದ ಸ್ವಾಮೀಜಿಗೆ ವೃಕ್ಷಲಕ್ಷ ಪರಿಸರ ಪ್ರಶಸ್ತಿಯನ್ನು ಯತಿದ್ವಯರು ಪ್ರದಾನ ಮಾಡಿದರು.

ಅನಂತ ಹೆಗಡೆ ಅಶೀಸರ ಪ್ರಾಸ್ತಾವಿಕ ಮಾತನಾಡಿದರು. ಡಾ. ಟಿ.ವಿ.ರಾಮಚಂದ್ರ ಸಮ್ಮೇಳನದ ವರದಿ ಮಂಡಿಸಿದರು. ಶಾಂತಾರಾಮ ಸಿದ್ದಿ ನಿರ್ಣಯ ಮಂಡಿಸಿದರು. ಅನಂತ ಭಟ್ಟ ಹುಳಗೋಳ ಸನ್ಮಾನ ಪತ್ರ ವಾಚಿಸಿದರು. ಮಠದ ಉಪಾಧ್ಯಕ್ಷ ವಿ.ಎನ್. ಹೆಗಡೆ ಬೊಮ್ನಳ್ಳಿ, ವೈ.ಬಿ.ರಾಮಕೃಷ್ಣ, ಸುರೇಶ ಹೆಗ್ಗಾರ ಉಪಸ್ಥಿತರಿದ್ದರು. ಆರ್.ಎನ್.ಹೆಗಡೆ ಉಳ್ಳೀಕೊಪ್ಪ ವಂದಿಸಿದರು. ಗಣಪತಿ ಕೆ.ಬಿಸಲಕೊಪ್ಪ ನಿರೂಪಿಸಿದರು.

### ಕೆರೆ ಸಮ್ಮೇಳನದ ಪ್ರಮುಖ ನಿರ್ಣಯಗಳು

# ಕೆರೆ ಸಂರಕ್ಷಣೆಗೆ ಯೋಜನೆ: ಕೆರೆ ಅತಿಕ್ರಮಣಕ್ಕೆ ತೆರೆ

ಶಿರಸಿ: ಪಶ್ಚಿಮಘಟ್ಟದ ಜಲಮೂಲಗಳು ಕೆರೆಗಳ ಸಂರಕ್ಷಣೆಗೆ ರಾಜ್ಯ ಸರ್ಕಾರ ವಿಶೇಷ ಯೋಜನೆ ರೂಪಿಸಬೇಕು. ಶಾಲಾಕಾಲೇಜುಗಳ ಪಠ್ಯೇತರ ಚಟುವಟಿಕೆಗಳ ಭಾಗವಾಗಿ ವಿದ್ಯಾರ್ಥಿಗಳಿಗೆ ಕೆರೆಗಳ ಸಮೀಕ್ಷೆ ಅಧ್ಯಯನ ನಡೆಸಲು ವಿಶೇಷ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆ ರೂಪಿಸಬೇಕು. ಪಶ್ಚಿಮಘಟ್ಟಗಳ ಕೆರೆಗಳ ಜಲಾನಯನ ಪ್ರದೇಶದಲ್ಲಿ ಇರುವ ಅರಣ್ಯಗಳ ರಕ್ಷಣೆಗೆ ಹಾಗೂ ವನೀಕರಣಕ್ಕೆ ವಿಶೇಷ ಯೋಜನೆಯನ್ನು ಅರಣ್ಯ ಇಲಾಖೆ ರೂಪಿಸಬೇಕು ಎಂಬಿತ್ಯಾದಿ ನಿರ್ಣಯಗಳನ್ನು ಕೆರೆ ಸಮ್ಮೇಳನದಲ್ಲಿ ಸ್ವೀಕರಿಸಲಾಗಿದೆ.

ಸ್ವರ್ಣವಲ್ಲಿಯ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಕೆರೆ ಸಮ್ಮೇಳನದಲ್ಲಿ, ಕೇಂದ್ರ ಸರ್ಕಾರದ ಸ್ವಚ್ಛತಾ ಅಭಿಯಾನದ ವ್ಯಾಪ್ತಿಯಲ್ಲಿ ಕೆರೆ ಸ್ವಚ್ಛತೆಗೆ ವಿಶೇಷ ಆದ್ಯತೆ ನೀಡುವಂತೆ ಒತ್ತಾಯಿಸಲಾಯಿತು.

ಸ್ಥಳೀಯ ಸಂಘ-ಸಂಸ್ಥೆಗಳು ಕೆರೆ ಸ್ವಚ್ಛತಾ ಅಭಿಯಾನ, ಕೆರೆ ಉತ್ಸವ, ಕೆರೆ ಹಬ್ಬ ಮುಂತಾದ ವ್ಯಾಪಕ ರಚನಾತ್ಮಕ ಜನಾಂದೋಲನಗಳನ್ನು ಕೈಗೊಳ್ಳಬೇಕು. ಕೆರೆಗಳ ಅತಿಕ್ರಮಣ ತಡೆಗೆ ಕಠಿಣ ಕ್ರಮ ಅತ್ಯವಶ್ಯ. ಸ್ಥಾಪಿತ ಹಿತಾಸಕ್ತಿಗಳಿಂದ ಆಗಿರುವ ಕೆರೆ ಅತಿಕ್ರಮಣ ತೆರವುಗೊಳಿಸಲು ಕಟ್ಟುನಿಟ್ಟಿನ ಕ್ರಮ ಆಗಬೇಕು. ಮಲೆನಾಡಿನ ಕೆರೆಗಳ ಹೂಳು ತೆಗೆಯಲು ಸ್ಥಳೀಯ ಪ್ರಯತ್ನಗಳು ಹೆಚ್ಚಾಗಬೇಕು. ದೇವಸ್ಥಾನ ಪುಷ್ಕರಣಿ, ಪುಣ್ಯ ತೀರ್ಥಗಳ ಉತ್ತಮ ನಿರ್ವಹಣೆಗೆ, ರಕ್ಷಣೆಗೆ ದೇವಾಲಯ ಆಡಳಿತ ಮಂಡಳಿಗಳು ಮುಂದಾಗಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಲಾಯಿತು.

ಕಪ್ಪತಗುಡ್ಡ,ಕೊಗ್ರೆ,ಶಾನಗಿರಿ,ಕೊಡಚಾದ್ರಿಗಳಂತಹ ಅಕ್ಷಯ ಜಲಪಾತ್ರೆಗಳನ್ನು ಬರಿದು ಮಾಡುವ ಬೃಹತ್ ಗಣಿಗಾರಿಕೆಗೆ ಸರ್ಕಾರ ಅವಕಾಶ ನೀಡಬಾರದು. ರಾಜ್ಯದಲ್ಲಿರುವ ಗ್ರಾಮ ಮಟ್ಟದ



ರಾಷ್ಟ್ರೀಯ ಕೆರೆ ಸಮ್ಮೇಳನ ಸಮಾರೋಪದಲ್ಲಿ ಶಿವನಹಳ್ಳಿಯ ರಾಮಕೃಷ್ಣ ಮಿಷನ್‌ನ ವಿಷ್ಣುಮಯಾನಂದ ಸ್ವಾಮೀಜಿ ಅವರಿಗೆ ವೃಕ್ಷಲಕ್ಷ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೆರೆ ಅಭಿವೃದ್ಧಿ ಸಂಘಗಳನ್ನು ಸರ್ಕಾರ ಶಕ್ತಿಯುತಗೊಳಿಸಿ ಬಲಗೊಳಿಸಬೇಕು. ಗ್ರಾಮ ಅರಣ್ಯ ಸಮಿತಿಗಳ ಮೂಲಕ ಕೆರೆಗಳ ಸಂರಕ್ಷಣೆಗೆ ಹಾಗೂ ಅಭಿವೃದ್ಧಿಗೆ ಅರಣ್ಯ ಇಲಾಖೆ ಯೋಜನೆ ರೂಪಿಸಬೇಕು. ದೇವರಕಾಡು, ರಾಮಪತ್ರೆಜಡ್ಡಿಗಳಂತಹ ಜೌಗು ಭೂಮಿಗಳನ್ನು ಸಂರಕ್ಷಿತ ಪ್ರದೇಶ ಎಂದು ಗುರುತಿಸಿ ರಕ್ಷಿಸಬೇಕು. ಮಲೆನಾಡಿನ ಕೆರೆಗಳ ವ್ಯಾಪ್ತಿ 5 ಎಕರೆಗಿಂತ ಕಡಿಮೆ ಇರುವುದರಿಂದ, ಕೆರೆ ವ್ಯಾಪ್ತಿ ಮಿತಿಯನ್ನು ಸಡಿಲಗೊಳಿಸಿ ಮಲೆನಾಡಿನ ಅತಿಚಿಕ್ಕ ಕೆರೆಗಳನ್ನು ಸಂರಕ್ಷಣೆ ಮಾಡಲು ಕ್ರಮ ಜರುಗಿಸಬೇಕು. ಕೆರೆ ಪ್ರಾಧಿಕಾರ, ಜಲಾನಯನ ಇಲಾಖೆ, ಜಿಲ್ಲಾ ಪಂಚಾಯತ, ಜಲಸಂವರ್ಧನಾ ಸಂಸ್ಥೆ ಮುಂತಾದ ಸರ್ಕಾರದ ಇಲಾಖೆಗಳಲ್ಲಿ ಕೆರೆ ಅಭಿವೃದ್ಧಿ ಬಗ್ಗೆ ಸಮನ್ವಯ ತರಬೇಕು. ಇದಕ್ಕೆ ಏಕಗವಾಕ್ಷಿ ಯೋಜನೆ ಅತ್ಯವಶ್ಯ.

ಪಟ್ಟಣಗಳ ತ್ಯಾಜ್ಯಗಳನ್ನು ಕೆರೆಗಳಿಗೆ ತುಂಬಿ ಕೆರೆ ನಾಶ ತಡೆಗೆ ಕಠಿಣ ಕ್ರಮ ಕೈಗೊಳ್ಳಬೇಕು. ಪಶ್ಚಿಮಘಟ್ಟದ ಹೊಳೆ, ಹಳ್ಳಗಳು ದಕ್ಷಿಣ ಭಾರತಕ್ಕೆ ನೀರಿನ ಮೂಲಗಳಾಗಿವೆ. ಈಗಾಗಲೇ ಜಾರಿ ಆಗಿರುವ ಬೃಹತ್ ನೀರಾವರಿ ಯೋಜನೆಗಳು ಹಾಗೂ ಬೃಹತ್ ಜಲವಿದ್ಯುತ್ ಯೋಜನೆಗಳು ಪಶ್ಚಿಮಘಟ್ಟದ ನದಿಗಳ ನೀರಿನ ಲಭ್ಯತೆಯನ್ನು ಅವಲಂಬಿಸಿವೆ. ಈ ನೀರಾವರಿ ಯೋಜನೆಗಳ ದಕ್ಷ ನಿರ್ವಹಣೆ ವ್ಯವಸ್ಥೆಗೊಳಿಸಬೇಕು. ಪಶ್ಚಿಮಘಟ್ಟದ ನದಿಗಳನ್ನು ತಿರುಗಿಸುವ ಹಾಗೂ ಜಲವಿದ್ಯುತ್ ಯೋಜನೆಗಳನ್ನು ಪಶ್ಚಿಮಘಟ್ಟದಲ್ಲಿ ನಿರ್ಮಾಣ ಮಾಡುವ ಹೊಸ ಯೋಜನೆಗಳ ಜಾರಿ ಬಗ್ಗೆ ಪುನರ್‌ವಿಮರ್ಶೆ ಆಗಬೇಕು. ಪಶ್ಚಿಮಘಟ್ಟದ ಜಲಮೂಲಗಳು, ಕೆರೆಗಳು, ಹಳ್ಳಗಳು ಅತಿಯಾದ ಕ್ರಿಮಿನಾಶಕ ಬಳಕೆಯಿಂದ ತೀವ್ರವಾಗಿ ಮಾಲಿನ್ಯಕ್ಕೆ ಒಳಗಾಗುತ್ತಿವೆ. ಎಂಡೋಸಲ್ಫಾನ್ ಸಿಂಪಡಣೆಯಿಂದ ಆಗಿರುವ ಭಾರಿ ಅನಾಹುತಗಳು ಈಗಾಗಲೇ ಇವೆ. ಆದ್ದರಿಂದ ಸರ್ಕಾರ ಮಲೆನಾಡಿನಲ್ಲಿ ಅತಿಯಾದ ಕ್ರಿಮಿನಾಶಕ ಬಳಕೆಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಲಾಯಿತು.

## ಪರಾರಿಯಾಗಿದ್ದ ಆರೋಪಿ ಬಂಧನ

ಭಟ್ಕಳ: ಧಾರವಾಡದ ಜಿಲ್ಲಾ ಕೇಂದ್ರ ಕಾರಾಗೃಹದಿಂದ ಕುಂದಾಪುರ ನ್ಯಾಯಾಲಯಕ್ಕೆ ವಿಚಾರಣೆಗಾಗಿ ಆರೋಪಿಯನ್ನು ಹಾಜರುಪಡಿಸಲು ಕರೆ ತರುತ್ತಿದ್ದಾಗ ಭಟ್ಕಳ ಬಸ್ ನಿಲ್ದಾಣದಿಂದ ಪೊಲೀಸರ ಕಣ್ ತಪ್ಪಿಸಿ ನಾಪತ್ತೆಯಾಗಿದ್ದ ಆರೋಪಿಯನ್ನು ಸುಮಾರು 50 ದಿನಗಳ ನಂತರ ಭಟ್ಕಳ



ಪೊಲೀಸರು ಭಟ್ಕಳ ರೈಲ್ವೆ ನಿಲ್ದಾಣದ ಬಳಿ ಶುಕ್ರವಾರ ರಾತ್ರಿ ಬಂಧಿಸಿದರು. ನ್ಯಾಯಾಲಯಕ್ಕೆ ಹಾಜರುಪಡಿಸಿದ

## ನೌಕಾ ದಿನಾಚರಣೆ ಅಂಗವಾಗಿ ಕಡಲ ತೀರ ಸ್ವಚ್ಛತಾ ಕಾರ್ಯಕ್ರಮ

